# ಕಲಿಕೆಗಾಗಿ ವಿನೋದದ ಬಳಕೆ

**ಅಂಕಿತ್ ಶುಕ್ಲಾ**

ತರಗತಿಯಲ್ಲಿಯ ಕಲಿಕೆಗೆ ಶಿಕ್ಷಕರು ಮತ್ತು ವಿದ್ಯಾರ್ಥಿಗಳಿಬ್ಬರ, ಅಂದರೆ ಈ ಎರಡೂ ಕಡೆಯ ನಿರಂತರ ಪ್ರಯತ್ನ ಬೇಕಾಗುತ್ತದೆ. ಅಲ್ಲೊಂದು ಪ್ರೇರಣಾದಾಯಕವಾದ ವಾತಾವರಣ ಇರಬೇಕಾಗುತ್ತದೆ. ಯಾಕೆಂದರೆ ನೀಡಲಾದ ಕಾರ್ಯ ಚಟುವಟಿಕೆಯ ಸ್ವರೂಪ, ಕಲಿಕಾರ್ಥಿಯ ನಿರೀಕ್ಷೆಗಳು, ಮಾಹಿತಿಗಳನ್ನು ಪ್ರಸ್ತುತಪಡಿಸುವ ರೀತಿ–ಇವೆಲ್ಲವೂ ಕಲಿಕೆಯ ಮೇಲೆ ಪರಿಣಾಮವನ್ನು ಬೀರುತ್ತದೆ. ಕಲಿಕೆಯ ವಿಭಿನ್ನ ಆಯಾಮಗಳನ್ನು ಮತ್ತು ಉದಾಹರಣೆಗಳು, ಕಲಿಕಾ ಚಟುವಟಿಕೆಗಳು ಹಾಗೂ ಮಕ್ಕಳು ತೊಡಗಿಸಿಕೊಂಡಿರುವ ಕಲಿಕಾ ಪ್ರಕ್ರಿಯೆಯ ನಾನಾ ಮಾರ್ಗಗಳ ಮೂಲಕ ಅದರ ಕಾರ್ಯ–ಸಾಧ್ಯತೆಯನ್ನು ನಾವು ಸುಲಭವಾಗಿ ಕಾಣಬಹುದಾಗಿದೆ. ಕಳೆದ ಸುಮಾರು ಮೂರು ವರ್ಷಗಳ ಕಾಲ ನಾನು ಅಜೀಂ ಪ್ರೇಮ್‌ಜಿ ಫೌಂಡೇಷನ್‌ನೊಂದಿಗೆ ಕಾರ್ಯನಿರ್ವಹಿಸಿದ ಬಳಿಕ ಹಾಗೂ ನನಗೆ ನಿಯೋಜಿಸಿದ ಜಿಲ್ಲೆಯಲ್ಲಿ ಅನೇಕ ಶಾಲೆಗಳಿಗೆ ಭೇಟಿ ನೀಡಿದ ನಂತರ ಈ ಸತ್ಯಗಳನ್ನು ಮನಗಂಡಿದ್ದೇನೆ.

2019ರಲ್ಲಿ ಛತ್ತೀಸ್‌ಗಢ ಸರ್ಕಾರವು, ಬೇಸಿಗೆ ರಜೆಗಳಲ್ಲಿ ಶಾಲೆಗಳನ್ನು ತೆರೆಯಬೇಕು ಮತ್ತು ಶಾಲೆಗಳಲ್ಲಿಯೇ ಬೇಸಿಗೆ ಶಿಬಿರದ ರೀತಿಯಲ್ಲಿ ಅನೇಕ ವಿನೋದದ ಚಟುವಟಿಕೆಗಳನ್ನು ನಡೆಸಬೇಕು ಎಂದು ತಿಳಿಸಿತು. ಇದರ ಪರಿಣಾಮವಾಗಿ ಒಂದೇ ಶಾಲಾ ಕ್ಯಾಂಪಸ್‌ನಲ್ಲಿ ಮೂರು ಶಾಲೆಗಳ ವಿದ್ಯಾರ್ಥಿಗಳ ಜೊತೆಗೆ ತೊಡಗಿಸಿಕೊಳ್ಳಲು ನನಗೆ ಸಾಧ್ಯವಾಯಿತು. ನಾನು ಶಾಲೆಗೆ ಹೋದ ತಕ್ಷಣ ನಾವೆಲ್ಲ ಹಳೆಯ ಮಿತ್ರರು ಎನ್ನುವ ರೀತಿಯಲ್ಲಿ ವಿದ್ಯಾರ್ಥಿಗಳೆಲ್ಲ ನನ್ನೆಡೆಗೆ ಧಾವಿಸಿ ಬಂದರು. ಕೆಲವು ಹುಡುಗರು ಫುಟ್‌ಬಾಲ್‌ನಲ್ಲಿ ತಲ್ಲೀನರಾಗಿದ್ದರೆ ಕೆಲವರು ಕ್ರಿಕೆಟ್ ಆಟದಲ್ಲಿ ನಿರತರಾಗಿದ್ದರು. ಇಡೀ ಆಟದ ಮೈದಾನದಲ್ಲಿ ಹುಡುಗಿಯರ ಸುಳಿವೇ ಇರದುದು ನನಗೆ ಒಗಟಾಗಿ ಕಾಣಿಸಿತು. ಅವರೆಲ್ಲರೂ ತಮ್ಮ ತಮ್ಮ ತರಗತಿಗಳಲ್ಲಿಯೇ ಉಳಿದಿದ್ದರು.

ನಾವು ಮುಖ್ಯೋಪಾಧ್ಯಾಯರ ಕಚೇರಿಗೆ ತೆರಳಿದೆವು. ಅವರು ನಮ್ಮನ್ನು ಸ್ವಾಗತಿಸಿ ಕೆಲವು ಹುಡುಗರಿಗಳಿಗೆ ಹಾಲ್‌ನ ಬಾಗಿಲು ತೆರೆಯುವಂತೆ ತಿಳಿಸಿದರು. ಹಾಲ್‌ನಲ್ಲಿ ವಿದ್ಯಾರ್ಥಿಗಳೆಲ್ಲ ಸೇರಲು ಆರಂಭಿಸಿದರು ಮತ್ತು ಕೆಲವೇ ನಿಮಿಷಗಳಲ್ಲಿ ಆ ಹಾಲ್ ಹುಡುಗ–ಹುಡುಗಿಯರಿಂದ ತುಂಬಿ ಹೋಯಿತು. ನನ್ನನ್ನು ಪರಿಚಯ ಮಾಡಿಕೊಂಡು, ಶಾಲೆಗೆ ಬಂದ ಉದ್ದೇಶವನ್ನು ನಾನು ಹೇಳಿದೆ.

**ಬದಲಾವಣೆಯ ಗಾಳಿ**

ಮೊದಲ ದಿನ ನಾನು ಅವರನ್ನು ಗುಂಪುಗಳಾಗಿ ವಿಂಗಡಿಸಿದೆ. ತಲಾ ಸುಮಾರು ಒಂಭತ್ತು ವಿದ್ಯಾರ್ಥಿಗಳನ್ನು ಒಳಗೊಂಡ ಹತ್ತು ಗುಂಪುಗಳನ್ನು ರಚಿಸಲಾಯಿತು. ನಾನು ಪ್ರತಿಯೊಂದು ಗುಂಪಿಗೂ ಕಥೆ ಪುಸ್ತಕಗಳನ್ನು ವಿತರಿಸಿ, ಆ ಕಥೆಗಳನ್ನು ಓದಿ ಪರಸ್ಪರ ಚರ್ಚೆ ಮಾಡುವಂತೆ ತಿಳಿಸಿದೆ. ಕಥೆಯಲ್ಲಿ ಬರುವ ಪಾತ್ರಗಳು, ಕಥಾಹಂದರ (plot), ಸಂಭಾಷಣೆಗಳು ಇತ್ಯಾದಿಗಳ ಬಗ್ಗೆ ಚರ್ಚೆ ನಡೆಸಬಹುದು ಎಂದು ಹೇಳಿದೆ. ಈ ಚರ್ಚೆಗಳ ಆಧಾರದಲ್ಲಿ ಅವರು ಒಂದು ನಾಟಕವನ್ನು ರಚಿಸಬೇಕಾಗಿತ್ತು. ಗುಂಪಿನ ಪ್ರತಿಯೊಬ್ಬರೂ ಕಥೆಗಳನ್ನು ಓದಿ ಚರ್ಚೆ ಮಾಡಿದ ಬಳಿಕ ಸಹಮತದ ಆಧಾರದಲ್ಲಿ ಒಂದು ನಾಟಕದ ಅಂತಿಮ ಕರಡನ್ನು ಸಿದ್ಧಪಡಿಸಿದರು.

ಎರಡನೇ ದಿನ, ನಾವು ದೊಡ್ಡ ಗುಂಪಿನಲ್ಲಿ ಕಥೆಯನ್ನು ಸಂಕ್ಷಿಪ್ತವಾಗಿ ಹಂಚಿಕೊಳ್ಳುವ ಮತ್ತು ಪಾತ್ರಗಳನ್ನು ಗುರುತಿಸುವ ಕೆಲಸದಲ್ಲಿ ನಿರತರಾದೆವು. ಪ್ರತಿಯೊಂದು ಗುಂಪು ಕೂಡ ತಮ್ಮ ಕಥೆಯನ್ನು ಹಂಚಿಕೊಂಡಿದ್ದು ಮಾತ್ರವಲ್ಲದೆ ಅವುಗಳಲ್ಲಿರುವ ನಾನಾ ಪಾತ್ರಗಳ ಬಗ್ಗೆಯೂ ಮಾತನಾಡಿದರು. ಇದೆಲ್ಲದರ ಫಲಿತಾಂಶವಾಗಿ ಒಂದು ಗೊಂಬೆಯಾಟ ಮೂಡಿಬಂದಿತು.

**ಗೊಂಬೆಯಾಟ**

ಇದಾದ ಬಳಿಕ ಅವರು ತಮ್ಮ ಕಥೆಗಳಿಗೆ ತಕ್ಕಂತೆ ಗೊಂಬೆಗಳನ್ನು ಸಿದ್ಧಪಡಿಸಲು ಆರಂಭಿಸಿದರು. ಮೊದಲು ಆ ಪಾತ್ರದ ಮುಖದ ಚಿತ್ರವನ್ನು ಅವರು ಬರೆಯಬೇಕು. ಉದಾಹರಣೆಗೆ ಕಥೆಯಲ್ಲಿ ಸಿಂಹ ಇದ್ದರೆ ಅವರು ಮೊದಲು ಸಿಂಹದ ಮುಖವನ್ನು ಚಿತ್ರಿಸಿ ಅದಕ್ಕೆ ಬಣ್ಣವನ್ನು ಹಾಕಬೇಕಾಗಿತ್ತು. ಅದಾದ ನಂತರ ಅದಕ್ಕೆ ಆಧಾರವಾಗಿ ಒಂದು ಕಾರ್ಡ್‌ಬೋರ್ಡ್‌ನ್ನು ಅಂಟಿಸುವುದು. ಹೀಗೆ ಅಂಟಿಸಿದ ಬಳಿಕ ಗೊಂಬೆಗೆ ಒಂದು ಕೋಲನ್ನು ಜೋಡಿಸುವುದು. ಇದರೊಂದಿಗೆ ಪ್ರದರ್ಶನಕ್ಕೆ ಬೇಕಾದ ಅವರ ಗೊಂಬೆಗಳು ಸಿದ್ಧವಾಗಿಬಿಟ್ಟವು! ಮೂರನೇ ದಿನವೇ ನಮ್ಮ ನಾಟಕ ಪ್ರದರ್ಶನಗೊಂಡಿತು.


ರಂಗವೇದಿಕೆ ಸಿದ್ಧಗೊಂಡಿತು. ವಿದ್ಯಾರ್ಥಿಗಳು ಒಂದು ಪರದೆಯ ಹಿಂದೆ ಕೋಲುಗಳಿಗೆ ಅಂಟಿಸಿದ ಗೊಂಬೆಗಳೊಂದಿಗೆ ಸಿದ್ಧರಾದರು. ಮುಂಭಾಗದಲ್ಲಿ ಕೇವಲ ಗೊಂಬೆಗಳು ಮಾತ್ರ ಕಾಣಿಸುವ ಹಾಗೆ ವಿದ್ಯಾರ್ಥಿಗಳು ಪರದೆಯ ಹಿಂದೆ ನಿಂತಿದ್ದರು. ಪ್ರತಿಯೊಂದು ಗುಂಪೂ ಒಂದಾದ ಮೇಲೊಂದರಂತೆ ಬಂದು ಗೊಂಬೆ–ಯಾಟವನ್ನು ಪ್ರದರ್ಶಿಸಿತು. ಮೊದಲನೆಯ ಗೊಂಬೆಯಾಟ–ಪ್ರಾಮಾಣಿಕ ಸೌದೆ ಕಡಿಯುವಾತ. ವಿದ್ಯಾರ್ಥಿಗಳು ತಮ್ಮ ಮನಸ್ಸಿನಲ್ಲಿರುವ ಎಲ್ಲ ವಿವರಗಳೊಂದಿಗೆ ಅತ್ಯಂತ ಸುಂದರವಾಗಿ ಗೊಂಬೆಯಾಟವನ್ನು ಪ್ರದರ್ಶಿಸಿದರು. ಆ ಬಳಿಕ ಅವರು ತಾವು ಪ್ರದರ್ಶಿಸಿದ ಪಾತ್ರಗಳ ಜೊತೆಗೆ ತಮ್ಮನ್ನು ತಾವು ಪರಿಚಯ ಮಾಡಿಕೊಂಡರು. ಗೊಂಬೆಯಾಟ ಪ್ರದರ್ಶನವಾದ ಬಳಿಕ ಒಂದು ಪ್ರಶ್ನೋತ್ತರ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಎಲ್ಲ ಕೊಡಲಿಗಳನ್ನೂ ಮನುಷ್ಯ ತೆಗೆದುಕೊಂಡಿದ್ದರೆ ಏನಾಗುತ್ತಿತ್ತು? ಯಾಕೆ ಆತ ಕೇವಲ ಕಬ್ಬಿಣದಿಂದ ಮಾಡಿದ ಕೊಡಲಿಯನ್ನೇ ಆಯ್ಕೆ ಮಾಡಿಕೊಂಡ? ಮುಂತಾದ ಕೆಲವು ಪ್ರಶ್ನೆಗಳು ಎದುರಾದವು. ಈ ಚರ್ಚೆ ನಿಜ ಜೀವನದ ಘಟನೆಗಳ ಬಗೆಗೂ ವಿದ್ಯಾರ್ಥಿಗಳು ಯೋಚಿಸುವಂತೆ ಅನುವು ಮಾಡಿಕೊಟ್ಟಿತು.

ನಾಲ್ಕನೇ ದಿನ ಇದ್ದ ನಾಟಕದ ಹೆಸರು–ದೊಡ್ಡವರು ಯಾರು? ಪ್ರೇಕ್ಷಕರಿಂದಲೇ ವ್ಯಕ್ತವಾದ ಈ ಕಥೆಯ ನೀತಿ ಏನೆಂದರೆ ಗಾತ್ರ–ಆಕಾರದ ಆಧಾರದಲ್ಲಿ ಯಾರೊಬ್ಬರನ್ನೂ ನಿರ್ಲಕ್ಷಿಸುವಂತಿಲ್ಲ. ಈ ಭೂಮಿಯ ಮೇಲಿರುವ ಪ್ರತಿಯೊಂದು ಜೀವಿಗೂ ಸಮಾನವಾದ ಗೌರವ ಮತ್ತು ಘನತೆ ಇದೆ. ಈ ಗೊಂಬೆಯಾಟ ಪ್ರದರ್ಶನದ ಬಳಿಕ ವಿದ್ಯಾರ್ಥಿಗಳು ಖುಷಿಯಿಂದ ಕುಣಿದಾಡಿದರು.

**'ಬಾಲ್ ಅಖ್‌ಬಾರ್' (ಮಕ್ಕಳ ಸುದ್ದಿ ಪತ್ರಿಕೆ)**

ಮುಂದಿನ ಚಟುವಟಿಕೆಯಾಗಿ ಅವರ ಗ್ರಾಮದಲ್ಲಿಯೇ ನಡೆಯುವ ಹೊಸ ವಿಷಯಗಳನ್ನು ಗಮನಿಸುವಂತೆ ಮಕ್ಕಳನ್ನು ನಾನು ಕೇಳಿಕೊಂಡೆ. ಮರುದಿನ ಅವರ ಬಳಿ ಹೇಳಿಕೊಳ್ಳಲು ಅನೇಕ ಸಂಗತಿಗಳಿದ್ದವು. ನಾನು ಮೊದಲಿಗೆ ಅವರೊಂದಿಗೆ ಸುದ್ದಿ ಪತ್ರಿಕೆಯ ವಿಭಾಗಗಳಾದ ಸುದ್ದಿ, ವರದಿಗಳು, ಜಾಹೀರಾತು ಇತ್ಯಾದಿಗಳ ಬಗ್ಗೆ ಚರ್ಚೆ ಮಾಡಿದೆ. ಮತ್ತೆ ಅವರನ್ನು ಗುಂಪುಗಳಾಗಿ ವಿಂಗಡಿಸಿದೆ ಮತ್ತು ತಮ್ಮ ಬಳಿ ಇರುವ ಸುದ್ದಿಗಳನ್ನು ಬರೆಯುವಂತೆ ಅವರಿಗೆ ತಿಳಿಸಿದೆ.

ಮಕ್ಕಳು ಸೂಕ್ಷ್ಮ ವಿವರಗಳನ್ನೂ ಗಮನಿಸಿದ್ದನ್ನು ತಿಳಿದು ಅಚ್ಚರಿಯಾಯಿತು. ಹಲವು ವಿದ್ಯಾರ್ಥಿಗಳು ಹಿಂದಿನ ದಿನ ಬಿದ್ದ ಮಳೆಯ ಬಗ್ಗೆಯೇ ಬರೆದರು. ಅವರಲ್ಲಿ ಕೆಲವರು ತರಕಾರಿ ಮತ್ತು ಹಣ್ಣಿನ ಅಂಗಡಿಗಳನ್ನು ಹೊಂದಿದ್ದರಿಂದ ಮಳೆ ಯಾವ ರೀತಿ ಪರಿಣಾಮ ಬೀರಿತು ಎಂಬ ಬಗ್ಗೆ ವಿವರಿಸಿದ್ದರು.




ಆ ಬಳಿಕ ಜಾಹೀರಾತುಗಳಿಗೆ ಸಂಬಂಧಿಸಿದಂತೆ ವಿವರಗಳನ್ನು ವಿದ್ಯಾರ್ಥಿಗಳು ಬರೆದಿದ್ದರು. ಶಾಂಪೂ, ಔಷಧಿಗಳು ಮುಂತಾದ ಜಾಹೀರಾತುಗಳನ್ನು ಪ್ರಸ್ತಾಪ ಮಾಡಿದ್ದ ಅವರಲ್ಲಿ ಒಬ್ಬರು ಒಂದು ಶಾಲೆಯ ಜಾಹೀರಾತನ್ನು ಬರೆದು ಅಲ್ಲಿ ಒದಗಿಸಲಾಗುವ ಸೌಲಭ್ಯಗಳನ್ನು ವಿವರಿಸಿದ್ದರು. ನನ್ನ ಗಮನ ಸೆಳೆದ ಇನ್ನೊಂದು ಜಾಹೀರಾತು– ತಂಬಾಕು. ಅದರಲ್ಲಿ ತಂಬಾಕು ಸೇವನೆಯಿಂದ ಆಗುವ ದುಷ್ಪರಿಣಾಮಗಳ ಬಗ್ಗೆ ಬೊಟ್ಟು ಮಾಡಲಾಗಿತ್ತು.

ಇವೆಲ್ಲ ಮಾಹಿತಿಗಳನ್ನು ವಿದ್ಯಾರ್ಥಿಗಳಿಂದ ಸಂಗ್ರಹಿಸಿದ ಬಳಿಕ ಮುಂದಿನ ಹಂತ ಈ ವಿಚಾರಗಳನ್ನು ಪತ್ರಿಕೆಯ ರೂಪದಲ್ಲಿ ಪ್ರಕಟಿಸುವುದು. ಈ ಲೇಖನಗಳನ್ನೆಲ್ಲ ಒಂದು ಚಾರ್ಟ್ ಪೇಪರ್ ಮೇಲೆ ಅಂಟಿಸುವ ಕೆಲಸ ಮಾಡಲಾಯಿತು. ಇದಕ್ಕಾಗಿ ಒಂದು 'ಪ್ರಕಟಣಾ ತಂಡ'ವನ್ನು ರಚಿಸಲಾಯಿತು. ಒಂದು ಪತ್ರಿಕೆಯನ್ನು ವಿನ್ಯಾಸಗೊಳಿಸುವ ಜವಾಬ್ದಾರಿಯನ್ನು ಈ ತಂಡಕ್ಕೆ ಒಪ್ಪಿಸಲಾಯಿತು. ಈ ತಂಡದಲ್ಲಿದ್ದ ವಿದ್ಯಾರ್ಥಿಗಳು ಚಾರ್ಟ್ ಪೇಪರ್ ಮೇಲೆ ಸುದ್ದಿಗಳು ಮತ್ತು ಜಾಹೀರಾತು ತುಣುಕುಗಳನ್ನು ಅಂಟಿಸುವ ಕೆಲಸವನ್ನು ನಿರ್ವಹಿಸಿದರು. ಇದರಿಂದ ಒಡಮೂಡಿದ್ದು 'ಬಾಲ್ ಅಖ್‌ಬಾರ್'– ಮಕ್ಕಳೇ ಮಾಡಿದ ಸುದ್ದಿ ಪತ್ರಿಕೆ! ಅದನ್ನು ತರಗತಿಯಲ್ಲಿ ಪ್ರದರ್ಶಿಸಿದಾಗ ಮಕ್ಕಳಿಗೆ ದೊಡ್ಡದೇನೋ ಸಾಧನೆ ಮಾಡಿದ ಖುಷಿ.

**ಮಕ್ಕಳ ಕಲಿಕೆ**

ಈ ಚಟುವಟಿಕೆಗಳಿಂದಾಗಿ ವಿದ್ಯಾರ್ಥಿಗಳ ಅಭಿವ್ಯಕ್ತಿಗೆ ವಿಪುಲವಾದ ಅವಕಾಶ ಸಿಕ್ಕಿದ್ದನ್ನು ಶಿಕ್ಷಕರು ಮತ್ತು ನಾನು ಗಮನಿಸಿದೆ. ಈ ಚಟುವಟಿಕೆಗಳು ಪ್ರತಿಯೊಬ್ಬ ವಿದ್ಯಾರ್ಥಿಯನ್ನೂ ಒಳಗೊಳ್ಳುವಂತೆ ಮಾಡಿತು. ಜೊತೆಗೆ ತಮ್ಮ ಅಭಿಪ್ರಾಯಗಳನ್ನು, ಯೋಚನೆಗಳನ್ನು ಎಲ್ಲರ ಮುಂದೆ ಮಂಡಿಸಲು ಅವರಿಗೆ ಧೈರ್ಯವನ್ನೂ ಮೂಡಿಸಿತು. ಗೊಂಬೆಯಾಟ ಮತ್ತು ಅದರ ಅಭ್ಯಾಸ ಇನ್ನಷ್ಟು ಉತ್ತಮವಾಗಿ ಮಾಡಬೇಕು ಎಂಬ ಆಸಕ್ತಿ ಅವರಲ್ಲಿ ಮೂಡಿಸಿತು. ಅವರು ಕಥೆಗಳನ್ನು ತಮಗೆ ತಿಳಿದ ರೀತಿಯಲ್ಲಿ ಸುಧಾರಣೆ ಮಾಡಿದರು. ಇದು ಭಾಷೆಯನ್ನು ಕಲಿಯುವ ಉತ್ತಮ ಮಾರ್ಗವಾಗಿ ಪರಿಣಮಿಸಿತು. ಭಾಷಾ ಕಲಿಕೆಯಲ್ಲಿನ ಉದ್ದೇಶಗಳು ಈಡೇರುವುದೇ ಹಾಗೆ– ವಿದ್ಯಾರ್ಥಿಗಳು ತಮ್ಮ ಮುಂದಿನ ಸಂಗತಿಗಳನ್ನು ದೃಶ್ಯೀಕರಿಸಲು ಸಾಧ್ಯವಾದರೆ ಅವರು ಹೆಚ್ಚು ಸೃಜನಶೀಲ ಮತ್ತು ಕಲ್ಪನಾತ್ಮಕವಾಗಿರಲು ಅವಕಾಶ ಮಾಡುತ್ತದೆ. ಗೊಂಬೆಯಾಟ ಪ್ರದರ್ಶನದ ಸಂದರ್ಭದಲ್ಲಿ ವಿದ್ಯಾರ್ಥಿಗಳು ಅವರದೇ ಕಲ್ಪನೆಗಳು ಮತ್ತು ಯೋಚನೆಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಯಶಸ್ವಿಯಾಗುವ ಮೂಲಕ ಇದನ್ನು ಸಾಧಿಸಿರುವಂತೆ ಕಂಡುಬಂದಿತು.

'ಬಾಲ್ ಅಖ್‌ಬಾರ್' ಚಟುವಟಿಕೆಯು ಮಕ್ಕಳು ಹೆಚ್ಚು ಎಚ್ಚರಿಕೆಯಿಂದ ಹಾಗೂ ಗಮನವಿಟ್ಟು ಕೆಲಸ ಮಾಡಲು ಕಲಿಸಿತು. ತಮ್ಮ ಸುತ್ತ ಘಟಿಸಿದ, ಸಾಮಾನ್ಯವಾಗಿ ಯಾರ ಗಮನಕ್ಕೂ ಬಾರದೇ ಇರುವ ಪ್ರತಿಯೊಂದು ಸಂಗತಿಯ ಅತಿ ಸಣ್ಣ ವಿವರಗಳನ್ನೂ ಅವರು ಗಮನಿಸಿದ್ದರು. ಚಾರ್ಟ್ ಪೇಪರ್ ಮೇಲೆ ಸುದ್ದಿಗಳನ್ನು ಅಂಟಿಸುವ ಮೂಲಕ ಅವರಲ್ಲಿ ಸ್ಥಾನಿಕ ಪ್ರಜ್ಞೆ ಮೂಡುವಂತೆ ಮಾಡಿತು; ಗಣಿತವನ್ನು ಕಲಿಸುವ ಸಂದರ್ಭದಲ್ಲಿ ಇಂತಹ ಪ್ರಯೋಗಗಳನ್ನು ಮಾಡಲಾಗುತ್ತದೆ. ಸುದ್ದಿ ಮತ್ತು ಜಾಹೀರಾತುಗಳ ರೂಪದಲ್ಲಿ ತಮ್ಮ ಅನುಭವಗಳನ್ನು ಹಂಚಿಕೊಳ್ಳುವುದರಿಂದ ಅವರಿಗೆ ತಮ್ಮ ಯೋಚನೆಗಳನ್ನು ವ್ಯಕ್ತಪಡಿಸಲು ಅವಕಾಶ ಸಿಕ್ಕಂತಾಯಿತು.

ಇವೆಲ್ಲ ಅನುಭವಗಳಿಂದ ನನಗೆ ತಿಳಿದುಬಂದ ಅಂಶವೇನೆಂದರೆ ಕಲಿಕೆ ಎಲ್ಲಿ ಕೂಡ ನಡೆಯಬಹುದು; ಅದು ಕ್ಲಾಸ್‌ರೂಂ ಇರಬಹುದು ಅಥವಾ ಆಟದ ಮೈದಾನವೂ ಆಗಿರಬಹುದು. ಈ ಸಂದರ್ಭದಲ್ಲಿ ನಾವು ಗಮನದಲ್ಲಿ ಇಟ್ಟುಕೊಳ್ಳಬೇಕಾದ ಸಂಗತಿ ಏನೆಂದರೆ ಸುತ್ತಮುತ್ತಲಿನ ವಾತಾವರಣವನ್ನು ಕಲಿಕಾ–ಸ್ನೇಹಿಯನ್ನಾಗಿ ಮತ್ತು ಸಂಪೂರ್ಣವಾಗಿ ಭಯಮುಕ್ತವಾಗಿರುವಂತೆ ನೋಡಿಕೊಳ್ಳಬೇಕು. ಪ್ರತಿಯೊಂದು ಮಗುವಿಗೂ ಯಾವುದೇ ವೇದಿಕೆಯಲ್ಲಿ ತನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಸೂಕ್ತ ಅವಕಾಶವನ್ನು ನೀಡಬೇಕು. ಇದರಿಂದ ಕಲಿಕೆಯೂ ಸಾಧ್ಯವಾಗುತ್ತ ಹೋಗುತ್ತದೆ.

**ಆಕರಗಳು ಮತ್ತು ಹೆಚ್ಚಿನ ಓದಿಗಾಗಿ**

*What Did You Ask at School Today?* Kamala Mukunda

*How People Learn: Introduction to learning Theories*; developed by Linda-Darling Hammond, Kim Austin, Suzanne Orcutt, and Jim Rosso

---



**ಅಂಕಿತ್ ಶುಕ್ಲಾ** ಅವರು 2017ರಲ್ಲಿ ಧಮ್‌ತರಿಯಲ್ಲಿ ಅಜೀಂ ಪ್ರೇಮ್‌ಜಿ ಫೌಂಡೇಷನ್‌ನ ಫೆಲೋ ಆಗಿ ಸೇರಿಕೊಂಡರು. ಪ್ರಸ್ತುತ ರಾಯ್‌ಗಢ ಬ್ಲಾಕ್ (ಛತ್ತೀಸ್‌ಗಢ)ನಲ್ಲಿ ಕಾರ್ಯನಿರ್ವಹಿಸುತ್ತಿರುವ ಅವರು ಗಣಿತಶಾಸ್ತ್ರದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಶುಕ್ಲಾ ಅವರು ಉತ್ತರ ಪ್ರದೇಶ ತಾಂತ್ರಿಕ ವಿಶ್ವವಿದ್ಯಾಲಯ, ಲಖನೌ ಇಲ್ಲಿ ತಮ್ಮ ಎಂಬಿಎ ಮತ್ತು ಬಿಟೆಕ್ ಪೂರೈಸಿದ್ದಾರೆ. ಫೌಂಡೇಷನ್ ಅನ್ನು ಸೇರಿಕೊಳ್ಳುವುದಕ್ಕೂ ಮುನ್ನ ಅವರು, ಬಟಿಂಡಾದಲ್ಲಿ 'ಪಂಜಾಬ್ ಮತ್ತು ಹರ್ಯಾಣದ ಹತ್ತಿ ಬೆಳೆಯುವ ಜಿಲ್ಲೆಗಳಲ್ಲಿ ಮಕ್ಕಳ ಹಕ್ಕುಗಳನ್ನು ಬಲಪಡಿಸುವುದು' ಎಂಬ ಯೋಜನೆಯ ಕಾರ್ಯಕ್ರಮ ನಿರ್ವಾಹಕರಾಗಿ ಕಾರ್ಯನಿರ್ವಹಿಸಿದ್ದರು. ಮತ್ತು ಭಾರತದ ಮೂರು ರಾಜ್ಯಗಳಲ್ಲಿ ಕ್ಷಯರೋಗ ಮತ್ತು ಡಯಾಬಿಟಿಸ್ ಮೆಲಿಟಸ್ ನಡುವಿನ ನಂಟಿಗೆ ಸಂಬಂಧಿಸಿದಂತೆ 'ಜಾಗರಣ್ ಪೆಹಲ್' ಮೂಲಕ ಮಾಡಲಾದ ಮಲ್ಟಿ ಮೀಡಿಯಾ ಪ್ರಚಾರದಲ್ಲಿ ಜಿಲ್ಲಾ ಯೋಜನ ಸಮನ್ವಯಕಾರರಾಗಿ ಕೆಲಸ ಮಾಡಿದ್ದಾರೆ. ಅವರನ್ನು

ankit.shukla@azimpremjifoundation.org ನಲ್ಲಿ ಸಂಪರ್ಕಿಸಬಹುದು:

---

ಅನುವಾದ: **ಮಂಜುನಾಥ್ ಚಾಂದ್** । ಪರಿಶೀಲನೆ: **ಚಂದ್ರಶೇಖರ್ ಮಂಡೆಕೋಲು**